ಶಿವಾಯಿ ಅವರಿಗೆ ತಲುಪಬೇಕಾದ ಕೊನೆ ನಿಲ್ದಾಣ ಎಂಬುದೊಂದಿರಲಿಲ್ಲ. ಆಳವಿರುವ ಹೊಳೆಯ ಹರಿಯುವಿಕೆ ಶಾಂತ ಎನ್ನುವಂತೆ ಕಲ್ಯಾಣಿ ಒಂದು ದಿನ ಮುನ್ಸೂಚನೆಯಿಲ್ಲದೆ ತನ್ನ ಮದುವೆ ಆಮಂತ್ರಣ ನೀಡಲು ನಿಲಯಕ್ಕೆ ಬಂದಳು. ನಿಲಯದ ಸಹೋದ್ಯೋಗಿಗಳಿಗೆ ಹುಸಿಯಾದ ನಿರೀಕ್ಷೆಯಿಂದ ನಿರಾಸೆ ಆಯಿತೆ ವಿನಃ ಕಲ್ಯಾಣಿಯ ಮುಖದಲ್ಲಿ ಪ್ರೇಮವೈಫಲ್ಯದ ದುಃಖವನ್ನು ಮರೆಮಾಚುವ ಕೃತಕ ನಗು, ಸುಳ್ಳು ಉತ್ಸಾಹ ಕಾಣಲಿಲ್ಲ. ಸ್ಟುಡಿಯೊಕ್ಕೆ ರೆಕಾರ್ಡಿಂಗಿಗೆ ಬರುವವಳಂತೆ ಸಹಜವಾಗಿದ್ದಳು. ನಿಲಯದ ಸಹಚರರು ರಾವ್ ಅವಳ ಎದುರಿಗೆ ಬಂದಾಗ ಉದ್ವೇಗಕ್ಕೆ ಒಳಗಾಗಬಹುದೆಂದು ಕಾದರು. ಹಾಡೊಂದನ್ನು ಗುನುಗುತ್ತ ಬಂದ ರಾವ್ ಅವರಿಬ್ಬರ ನಡುವೆ ನೇಯ್ದುಕೊಂಡ ನಿಶ್ಶಬ್ದ ಕಥನವನ್ನು ಪ್ರಥಮ ಪುರುಷ ನಿರೂಪಕನಂತೆ ನಿರ್ಲಿಪ್ತ ಧಾಟಿಯಲ್ಲೆ ನಿರ್ವಹಿಸಿದರು. ಕೈ ಹಿಡಿಯುವಾತ ಜರ್ಮನಿಯಲ್ಲಿರುತ್ತಾನೆಂದಳು. 'ತವರಿಗೆ ಬಂದಾಗ ಆಕಾಶವಾಣಿಯತ್ತ ಹಾದು ಹೋಗು ಮತ್ತ' ಎಂದು ರಾವ್ ಅವಳ ಕೈ ಕುಲುಕಿದರು. ವಿಷಾದವಿರದ ಸರಳ ವಿದಾಯ ಹಿತವಾಗಿತ್ತು. ಎರಡು ವರ್ಷದ ಬಳಿಕ ರಾವ್ ಮದುವೆಯಾದರು. ಮದುವೆಗೆಂದೇ ಬಂದಿದ್ದ ಕಲ್ಯಾಣಿ ಜರ್ಮನಿಯ ಬ್ಲ್ಯಾಕ್ ಫಾರೆಸ್ಟ್ ಕುಕೂ ಕಂಪನಿ ತಯಾರಿಸಿದ ವಾಚನ್ನು ರಾವ್ ಕೈಯಿಂದ ಅವರ ಹೆಂಡತಿಯ ಕೈಗೆ ಉಡುಗೊರೆಯಾಗಿ ಮಂಟಪದಲ್ಲಿ ಕಟ್ಟಿಸಿದ್ದಳು. ಈ ಗಡಿಯಾರದ ಘಟನೆ ನಿವೃತ್ತಿಯ ನಂತರ ಯಾಕೆ ಕಲಕತೊಡಗಿತು ಎಂಬುದು ಅವರಿಗೇ ಬಗೆಹರಿದಿರಲಿಲ್ಲ.

ತನ್ನ ಮತ್ತು ಕಲ್ಯಾಣಿಯ ನಡುವೆ ತಣ್ಣಗೆ ಹರಿದ ಕಾಲಕ್ಕೆ ಪ್ರೀತಿ, ಪ್ರೇಮದ ತಲೆಬರೆಹವನ್ನು ಅಂಟಿಸಲು ಅವರಿಗೇ ಅನುಮಾನ ಉಂಟಾಗುತ್ತದೆ. ಅವಳನ್ನು ಹೆಂಡತಿಯಾಗಿ ಪಡೆಯುವ ಕನಸನ್ನು ಅವರು ಕಂಡವರಲ್ಲ. ಕಲ್ಯಾಣಿ ಜೀವನ ಸಂಗಾತಿಯ ಆಯ್ಕೆಯಲ್ಲಿ ಮುಕ್ತವಾಗಿದ್ದಳು. ಹೆಂಡತಿ ಜತೆಗಿನ ಸಂಸಾರದ ಮಧ್ಯದಲ್ಲಿ ಕಲ್ಯಾಣಿ ಮಾಜಿ ಪ್ರೇಯಸಿ ಅವತಾರದಲ್ಲಿ ಇಣುಕಿದ್ದಿಲ್ಲ. ಹೆಂಡತಿಯ ಅಗಲುವಿಕೆಯಿಂದ ತೆರವಾದ ಸ್ಥಾನವನ್ನು ಕಲ್ಯಾಣಿ ತುಂಬುವ ಸಾಧ್ಯತೆಯನ್ನೂ ಅವರು ಯೋಚಿಸಿದ್ದಿಲ್ಲ. ಅವಳಿಗೆ ತನ್ನ ಕುರಿತು ಒಲವಿತ್ತೇ ಎಂಬ ಕುತೂಹಲವೂ ಇರಲಿಲ್ಲ. ತಾನಾಗಿಯೇ ಪ್ರಪೋಸ್ ಮಾಡಿದ್ದರೆ ಅವಳು ಒಪ್ಪುತ್ತಿದ್ದಳೇ? ಅಂತಹ ಅಪೇಕ್ಷೆ ಅವಳಲ್ಲಿ ಗುಟ್ಟಾಗಿತ್ತೆ? ತಮಗಿಬ್ಬರಿಗಿಲ್ಲದ ಆಸಕ್ತಿ ನಿತ್ಯ ಉಸಿರಾಡುತ್ತಿದ್ದ ಪರಿಸರದಲ್ಲಿ ಒತ್ತಾಯಿಸುತ್ತಿದ್ದದನ್ನು ಗುಟ್ಟಾಗಿ ಇಷ್ಟಪಡುತ್ತಿದ್ದೆವೆ? ಈ ಪ್ರಶ್ನೆಗಳನ್ನು ಕೇಳಬೇಕಾದ ಕಾಲದಲ್ಲಿ ಕೇಳದೇ ಈಗೇಕೆ ಸಾಧ್ಯವಿದ್ದ ಅವಕಾಶಗಳ ಪರಿಶೀಲನೆಗೆ ಮುಂದಾಗಿದ್ದೇನೆ ಎಂದು ಗೊಂದಲಿಸುತ್ತಾರೆ. ಪರೀಕ್ಷೆಗೆ ಓದದೆ ಬಿಟ್ಟ ಅಧ್ಯಾಯದ ಮೇಲೆ ಪ್ರಶ್ನೆಗಳೇ ಇರದ ಅದೃಷ್ಟ ಅಭ್ಯರ್ಥಿ ತಾನು ಎಂದೂ ಅನಿಸುವುದು.

ಮೂವತ್ತು ವರ್ಷಗಳ ನಂತರ ಮತ್ತೆ ಕಲ್ಯಾಣಿಯ ಗಾಯನವನ್ನು ಕೇಳುವ ಅಪೇಕ್ಷೆಯಾಗಿ ರಾವ್ ಯೂಟ್ಯೂಬ್ ಚಾನೆಲ್‌ನಲ್ಲಿ ಹುಡುಕುತ್ತಿದ್ದಾಗ ಗಿಟಾರ್ ನುಡಿಸುತ್ತ ಹಾಡುತ್ತಿದ್ದವಳು ಕಂಡಳು. ಮುಖಭಾವ ಮತ್ತು ವೇಷದಲ್ಲಿ ಸ್ವಲ್ಪ ಬದಲಾದರೂ ಅದು ಕಲ್ಯಾಣಿಯದೇ ಮಧುರ ಕಂಠ. ಅದೇ ಕಪ್ಪು ಕಣ್ಣು; ಕೂದಲು ಕಂದು. ನೀಳ ಮೂಗಿನ ದುಂಡು ಮುಖ. ಮೊದಲಿನಂತೆ ಹಿಂದೂಸ್ತಾನಿ ರಾಗವನ್ನು ಹಾಡುತ್ತಿಲ್ಲ. 'ಟೈಟಾನಿಕ್' ಸಿನೆಮಾದ ಟೈಟಲ್ ಹಾಡಿನ ಜೊತೆಗೆ ಜನಪ್ರಿಯ ಇಂಗ್ಲಿಷ್ ಮತ್ತು ಹಿಂದಿ ಪಾಪ್ ಗೀತೆಗಳನ್ನು ಹಾಡುತ್ತಿದ್ದಾಳೆ. ಸ್ವರ ಒತ್ತು, ಸ್ಪಷ್ಟ ಉಚ್ಚಾರ, ಭಾವನೆಯನ್ನು ಅಭಿನಯಿಸುವ ರೆಪ್ಪೆ ಮುಚ್ಚಿ ತೆರೆಯುವ ಹೊಳಪಿನ ಮಾದಕ ಕಣ್ಣು ಮತ್ತು ಲವಲವಿಕೆಯಿಂದ ಅರಳುವಿಕೆಗೆ ಸಭೆಯಲ್ಲಿ

